

## ನಕ್ಕುಬಿಡಿ



**ಧಾರಾವಾಹಿ**

'ನನಗೆ ಧಾರಾವಾಹಿ ಅಂದ್ರೆ ತುಂಬಾ ಇಷ್ಟ'

'ಶಾಲೆಗೆ ಹೋಗುವ ನೀನೂ ಧಾರಾವಾಹಿ ನೋಡ್ತಿಯಾ?'

'ನಾನು ನೋಡುವುದಿಲ್ಲ. ಧಾರಾವಾಹಿ ಇಲ್ಲದಿದ್ದಾಗ ಅಮ್ಮ ಓದೋ, ಬರಿಯೋ ಅಂತಾನೇ ಇರ್ತಾಳೆ. ಆದರೆ ಧಾರಾವಾಹಿ ಶುರುವಾಯ್ತೋ ಅಮ್ಮ ಈ ಲೋಕದಲ್ಲೇ ಇರುವುದಿಲ್ಲ. ನಾನು ಗೆಳೆಯರ ಮನೆಗೆಲ್ಲ ಹೋಗಿ ಆಡಿ ಬಂದರೂ ಅಮ್ಮನಿಗೆ ಗೊತ್ತೇ ಆಗುವುದಿಲ್ಲ!'

★★★

**ಹೋಮ್ ವರ್ಕ್**

'ಪಪ್ಪಾ! ನಮ್ಮ ಟೀಚರ್ ಕೇಳಿದರು ನಿನಗೆ ಹೋಮ್ ವರ್ಕ್ ಯಾರು ಹೇಳಿಕೊಡ್ತಾರೆ? ಅಂತ. ನಾನು ಪಪ್ಪ ಅಂತ ಹೇಳಿದೆ.'

'ಹೇಳಿಕೊಟ್ಟದ್ದು ಪೂರ್ತಿ ಸರಿ ಇದೆ ಅಂದರಾ?'

'ಇಲ್ಲಾ. ಎಲ್ಲಾ ತಪ್ಪಂತೆ. ನಿನಗೇ ಟ್ಯೂಷನ್ ಕ್ಲಾಸಿಗೆ ಹೋಗಲು ಹೇಳಿದ್ದಾರೆ.'

★★★

**ಕೆಲಸ**

'ನನ್ಮಗ ಮನೇಲಿ ದಿನಾಲು ಎರಡು ಕೆಲಸ ತಪ್ಪದೇ ಮಾಡ್ತಾನೆ.'

'ನಿಮ್ಮಗ ಅಷ್ಟಾದರೂ ಮಾಡ್ತಾನೆ. ನನ್ಮಗಂದು ಏನೂ ಇಲ್ಲ.'

'ಅಯ್ಯೋ! ಯಾವ ಕೆಲಸ ಅಂದ್ರಿ. ಒಂದು, ಟೀವಿ ನೋಡ್ತಾ ಇರೋದು. ಇನ್ನೊಂದು, ಮೊಬೈಲ್‌ನಲ್ಲಿ ಮಾತಾಡ್ತಾ ಇರೋದು.'

★★★

**ಶಾಲೆಗೆ ಫಸ್ಟ್**

'ಪುಟ್ಟಾ, ನೀನು ದಿನಾಲು ಜವಾನ ಶಾಲೆಯ ಬೀಗ ತೆಗೆಯುವ ಮೊದಲೇ ಶಾಲೆಗೆ ಬರ್ತಿಯಂತಲ್ಲ ಯಾಕೆ?'

'ಮತ್ತೆ ನೀವೇ ಹೇಳಿದ್ದಿರಲ್ಲ ಮಿಸ್, ಶಾಲೆಗೇ ಫಸ್ಟ್ ಬರಬೇಕು ಎಂದು.'

★★★

**ಭಿಕ್ಷೆ**

'ಧಾರಾವಾಹಿ ನೋಡ್ತಾ ಕುಳಿತುಬಿಟ್ಟೆಯಲ್ಲೆ! ಭಿಕ್ಷೆ ಬೇಡಲು ಮುಂದಿನ ಮನೆಗೆ ಹೋಗೋದಿಲ್ಲವೇನು?'

'ಹೋಗ್ತೇನೆ, ಜಾಹೀರಾತು ಶುರುವಾಗ್ಲಿ ತಾಳಮ್ಮಾ.'

★★★

**ಬೆಡ್ ರೆಸ್ಟ್**

'ಆಪರೇಷನ್ ಆದಮೇಲೆ ನೀನು ಕೆಲಸ ಮಾಡಬಾರದು. ಬೆಡ್ ರೆಸ್ಟ್ ತೆಗೆದುಕೊಳ್ಳಬೇಕು.'

'ನಮ್ಮನೇಲಿ ಬೆಡ್ಡೇ ಇಲ್ಲ ಡಾಕ್ಟ್ರೆ, ಚಾಪೆ ಇದೆ ಆಗಬಹುದಾ?'

**(ಸಂಗ್ರಹ) ದೇವಿದಾಸ ಸುವರ್ಣ, ಅಂಕೋಲಾ**

ವೇದಿಕೆಯ ಮೇಲೆ ಗಿಟಾರಿನ ತಂತಿಗಳು ಮುರಿಯುವವರೆಗೂ ಬಾರಿಸಿದ ಪುಂಡಲೀಕ ಆನಂತರ ಕೆಳಗೆ ಬಂದು ಪತ್ನಿಯನ್ನು ಕೇಳಿದ, 'ಡಿಯರ್! ಹೇಗೆ ಬಾರಿಸಿದೆ?'

ಪತ್ನಿ: ನಿಜಕ್ಕೂ ನೀವು ಟಿವಿಯಲ್ಲಿ ಪ್ರೋಗ್ರಾಂ ಕೊಡಬೇಕಾಗಿತ್ತು.

ಪುಂಡಲೀಕ: (ಸಂಭ್ರಮಿಸುತ್ತಾ) ಓಹೋ! ಹಾಗಾದರೆ ನಾನು ಅಷ್ಟು ಚೆನ್ನಾಗಿ ಬಾರ್ಸಿದೆ ಅನ್ನು.

ಪತ್ನಿ: ಟಿವಿ ಆದರೇ ಕುಟ್ಟಿ ಪುಡಿ ಪುಡಿ ಮಾಡಲು ಸಾಧ್ಯವಾಗುತ್ತದಲ್ವಾ!

★★★

ರಸ್ತೆಯಲ್ಲಿ ನಡೆದು ಹೋಗುತ್ತಿದ್ದ ಇಬ್ಬರು ಯುವತಿಯರನ್ನು ಪುಂಡಲೀಕ, ಶಿಂಗಲೀಕ ಹಿಂಬಾಲಿಸಿ ಹೊರಟರು. ಇದನ್ನು ಕಂಡ ಯುವತಿಯರು ತಮ್ಮ ವ್ಯಾನಿಟಿ ಬ್ಯಾಗ್‌ನಿಂದ ರಾಖಿ ತೆಗೆದು ಇಬ್ಬರಿಗೂ ಒಬ್ಬೊಬ್ಬರ ಕೈಗೆ ಕಟ್ಟಿದರು.

ಆಗ ಪುಂಡಲೀಕ ಉಲಿದ, 'ಪರವಾಗಿಲ್ಲ, ಬಿಡಯ್ಯಾ, ನಾನು ನಿನ್ನ ತಂಗೀನ ಪ್ರೀತಿಸ್ತೀನಿ... ನೀನು ನನ್ನ ತಂಗಿಯನ್ನು ಪ್ರೀತಿಸು...!'

★★★



ಕೋರ್ಟ್ ಕಟಕಟೆಯಲ್ಲಿ ನಿಂತಿದ್ದ ಪುಂಡಲೀಕ, ಜಡ್ಜ್ ಮುಂದೆ ಅರಿಕೆ ಮಾಡಿಕೊಂಡ: 'ಯುವರ್ ಆನರ್! ನನಗೆ ಈಗಲೇ ತಕ್ಷಣವೇ ನನ್ನ ಹೆಂಡ್ತಿಯಿಂದ ವಿಚ್ಛೇದನ ಕೊಡಿಸಿ!'

ಜಡ್ಜ್: ಏನು ಅಷ್ಟು ಅರ್ಜೆಂಟ್?

ಪುಂಡಲೀಕ: ನನ್ನನ್ನು ಅವಳು ಮದುವೆಯಾಗಿ ಆರು ತಿಂಗಳಾಗಿವೆ! ಅವಳು ಅಂದಿನಿಂದ ಇಂದಿನವರೆಗೂ ನನ್ನೊಂದಿಗೆ ಒಂದೇ ಒಂದು ಮಾತಾಡಿದ್ರೆ ಕೇಳಿ!

ಜಡ್ಜ್: ಮತ್ತೊಮ್ಮೆ ಯೋಚಿಸಿ ನೋಡಿ... ಇಂಥ ಅದೃಷ್ಟ ಎಲ್ಲರಿಗೂ ಸಿಗುವುದಿಲ್ಲ!

**(ಸಂಗ್ರಹ) ಜಿ.ವಿ.ಪ್ರಭು, ಬೆಂಗಳೂರು**